## ತಿಂಡಿ, ಊಟ ಉಚಿತ...

ಒಮ್ಮೆ ಆ ಊರಿನ ಅತೀ ಸೋಮಾರಿ ಮನುಷ್ಯ ದಿನ ಪತ್ರಿಕೆಯಲ್ಲಿ, 'ನನಗೆ ತುರ್ತಾಗಿ ಸೇವಕ ಬೇಕಾಗಿದ್ದಾನೆ. ಸಂಬಳ ಇಲ್ಲ. ಆದರೆ, ಬೆಳಗಿನ ಉಪಹಾರ, ಎರಡು ಊಟ ನೀಡಲಾಗುವುದು' ಎಂದು ಜಾಹೀರಾತು ನೀಡಿದ. ಸರಿ, ತಪ್ಪದೆ ಊಟವಾದರೂ ಸಿಗುತ್ತದಲ್ಲ ಎಂದುಕೊಂಡವನೊಬ್ಬ ಈತನ ಎದುರು ಬಂದು ಕೈಕಟ್ಟಿ ನಿಂತು, 'ಸ್ವಾಮಿ, ನೀವು ಕೊಟ್ಟ ಜಾಹೀರಾತು ಓದಿದೆ. ನನ್ನ ಒಪ್ಪಿಗೆ ಇದೆ. ಕೆಲಸ ಏನು?' ಎಂದ. ಆಗ ಆ ಮಹಾಸೋಮಾರಿ, 'ಪಕ್ಕದ ಬೀದಿಯಲ್ಲಿರುವ ಶ್ರೀ ಮಠದಿಂದ ಬೆಳಗಿನ ಎರಡು ಉಪಹಾರ, ಮಧ್ಯಾಹ್ನ, ರಾತ್ರಿಗೆ ಎರಡೆರಡು ಊಟ ತರಬೇಕು. ಒಂದು ನಿನಗೆ ಮತ್ತೊಂದು ನನಗೆ. ಇದಿಷ್ಟೇ ನೀನು ಮಾಡಬೇಕಿರುವ ಕೆಲಸ' ಎಂದ.

**ಅರವಿಂದ ಜೋಷಿ**





## ಬುದ್ಧಿವಂತ

ಶಾಲೆಯಲ್ಲಿ ಮೇಷ್ಟ್ರು ಪಾಠ ಮಾಡುತ್ತಿದ್ದರು. ಹಿಂದಿನ ಬೆಂಚಿನಲ್ಲಿ ಕುಳಿತು ತೂಕಡಿಸುತ್ತಿದ್ದ ನಂಜನನ್ನು ಕರೆದು ಬೋರ್ಡ್ ಮೇಲೆ, 'ಉಗುರುಗಳನ್ನು ಕಡಿಯಬಾರದು, ಕತ್ತರಿಸಬೇಕು' ಎಂದು ಬರೆಯಲು ತಿಳಿಸಿದರು. ನಂಜ ನಿದ್ದೆಗಣ್ಣಲ್ಲಿ ಎದ್ದು ಬಂದು ಬೋರ್ಡ್ ಮೇಲೆ ಗುರುಗಳು ಹೇಳಿದ ಹಾಗೆಯೇ ಬರೆದ. ಆದರೆ, ಆರಂಭದ 'ಉ' ಪದ ಬಿಟ್ಟು ಹೋಗಿತ್ತು. 'ಗುರುಗಳನ್ನು ಕಡಿಯಬಾರದು, ಕತ್ತರಿಸಬೇಕು.' ಅದನ್ನು ಓದಿ ಗುರುಗಳು ಬೆಚ್ಚಿಬಿದ್ದರು.

**ವಿ. ಹೇಮಂತ ಕುಮಾರ್**